ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಕಾ.ಅ(ವಿ)/ರಾ.ರಾ.ನ/ಆ.ಮ/54 /2021–22

ಕಾರ್ಯಪಾಲಕ ಅಭಿಯಂತರರು(ವಿದ್ಯುತ್) ರವರ ಕಛೇರಿ
ರಾಜರಾಜೇಶ್ವರಿ ನಗರ ವಲಯ,
ರಾಜರಾಜೇಶ್ವರಿ ನಗರ ಬೆಂಗಳೂರು–98,
ದಿನಾಂಕ: 19 /03/2022

ಆಡಳಿತಾತ್ಮಕ ಮಂಜೂರಾತಿ ಜ್ಞಾಪನ ಪತ್ರ

ಕಾಮಗಾರಿಯ ಹೆಸರು: Operation and maintenance of street lighting system in ward no-16, Package R1 of Rajarajeshwari Nagar Zone.

ಅಂದಾಜು ಮೊತ್ತ: 16.00 ಲಕ್ಷಗಳು

ಉಲ್ಲೇಖ:

1. ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿಗಳ ಸ್ಥಾಯಿ ಸಮಿತಿಯ ಅಧಿಕಾರ ಚಲಾಯಿಸಿ ಮಾನ್ಯ ಆಡಳಿತಗಾರರ ದಿನಾಂಕ:16/02/2022 ರ ನಡವಳಿ ವಿಷಯ ಸಂಖ್ಯೆ:520/2021–22
2. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಟಿಪ್ಪಣಿ ಆದೇಶ ಸಂಖ್ಯೆ: ಪಿ.ಎಸ್.ಆರ್(ಉ)/3874/21–22, ದಿನಾಂಕ:28/12/2021.
3. ಅಧೀಕ್ಷಕ ಅಭಿಯಂತರರು (ವಿದ್ಯುತ್) ರವರ ಅನುಮೋದನೆ ಆದೇಶ ಸಂಖ್ಯೆ: ದಿನಾಂಕ: 19–03–2022.

******

ಈ ಮೇಲಿನ ವಿಷಯದಲ್ಲಿ ತಿಳಿಸಿರುವ ಕಾಮಗಾರಿಗೆ 2021–22ನೇ ಸಾಲಿನ ಪಾಲಿಕೆ ಆಯವ್ಯಯ ಲೆಕ್ಕಶೀರ್ಷಿಕೆ **P0300 M and R to Street Lights -Replacement of Burnt Bulbs etc.(Package)** ರಲ್ಲಿ ಅನುದಾನ ನಿಗಧಿಯಾಗಿದ್ದು ಸದರಿ ಲೆಕ್ಕಶೀರ್ಷಿಕೆ ರಡಿಯಲ್ಲಿ ಈ ಕಾಮಗಾರಿಯ ಅಂದಾಜು ಮೊತ್ತ ರೂ.16.00 ಲಕ್ಷಗಳಿಗೆ ಉಲ್ಲೇಖ(1)ರಲ್ಲಿ ಅನುಮೋದನೆಯಾಗಿರುವ ಕ್ರಿಯಾ ಯೋಜನೆಯ ಪುಟ ಸಂಖ್ಯೆ 15 ಮತ್ತು ಕ್ರಮ ಸಂಖ್ಯೆ 130 ರಲ್ಲಿ ಈ ಕಾಮಗಾರಿಯು ಒಳಗೊಂಡಿರುತ್ತದೆ. ಉಲ್ಲೇಖ(2)ರಲ್ಲಿ ಮಾನ್ಯ ಆಯುಕ್ತರ ಆದೇಶದಂತೆ ಈ ಕಾಮಗಾರಿಗೆ ಘಟನೋತ್ತರ ಆಡಳಿತಾತ್ಮಕ ಮಂಜೂರಾತಿ ನಿರೀಕ್ಷಿಸಿ ಈ ಕಾಮಗಾರಿಗೆ ಟೆಂಡರ್ ಆಹ್ವಾನಿಸಲು ಅನುಮೋದಿಸಿರುವಂತೆ ಈ ಕಾಮಗಾರಿಗೆ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮಂಜೂರಾತಿ ನಿರೀಕ್ಷಿಸಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಉಲ್ಲೇಖ(3)ರ ಆದೇಶದಲ್ಲಿ ಅಧೀಕ್ಷಕ ಅಭಿಯಂತರರು (ವಿದ್ಯುತ್), ಬಿಬಿಎಂಪಿ ರವರು ಮಾನ್ಯ ಮುಖ್ಯ ಆಯುಕ್ತರು ರವರ ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂಖ್ಯೆ: ಬಿ12(1)ಪಿ.ಆರ್/394/21–22, ದಿನಾಂಕ:27/7/2021 ರಂತೆ ಈ ಕಾಮಗಾರಿಯ ಅಂದಾಜು ಮೊತ್ತ ರೂ. 16.00 ಲಕ್ಷಗಳಿಗೆ ಘಟನೋತ್ತರ ಆಡಳಿತಾತ್ಮಕ ಮಂಜೂರಾತಿ ನೀಡುತ್ತಾರೆ.

ಆದ್ದರಿಂದ, ಈ ಮೇಲಿನ ಅಂಶಗಳ ಹಿನ್ನಲೆಯಲ್ಲಿ ಈ ಕಾಮಗಾರಿಯ ಅಂದಾಜು ಮೊತ್ತ ರೂ. 16.00 ಲಕ್ಷಗಳ ಅಂದಾಜುಪಟ್ಟಿಗೆ ಮಾನ್ಯ ಆಯುಕ್ತರು ರವರ' ಕಛೇರಿ ಆದೇಶ ಸಂಖ್ಯೆ: ಬಿ12(1)ಪಿ.ಆರ್/394/21–22, ದಿನಾಂಕ: 18/1/2022 ರಲ್ಲಿ ಕಾರ್ಯಪಾಲಕ ಅಭಿಯಂತರರಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆಯನ್ವಯ ಆಡಳಿತಾತ್ಮಕ ಮಂಜೂರಾತಿ ಜ್ಞಾಪನ ಪತ್ರಕ್ಕೆ ಸಹಿ ಮಾಡಲಾಗಿದೆ. ಸದರಿ ಮಂಜೂರಾತಿಯನ್ನು ಈ ಕಛೇರಿಯ ಆಡಳಿತಾತ್ಮಕ ಮಂಜೂರಾತಿ ಪುಸ್ತಕದ ಪುಟ ಸಂಖ್ಯೆ 64 & 65 ರ ಕ್ರಮ ಸಂಖ್ಯೆ 54 ರಲ್ಲಿ ದಾಖಲಿಸಲಾಗಿದೆ.

ಷರತ್ತುಗಳು:

1) ದರಪಟ್ಟಿ ಆಧಾರಿತವಲ್ಲದ ಅಂಶಗಳಿಗೆ ಡೆಟಾ ದರವನ್ನು ತಯಾರಿಸಿ ಅನುಮೋದನೆ ಪಡೆಯುವುದು.
2) ಅಂದಾಜು ಪಟ್ಟಿಯಲ್ಲಿ ಮಾರುಕಟ್ಟೆ ದರ ಅಳವಡಿಸಿಕೊಂಡಿರುವ ಅಂಶಗಳಿಗೆ ಕೊಟೇಶನ್ ಕರೆದು ಅನುಮೋದನೆ ಪಡೆಯುವುದು.
3) ಕೆಲಸದ ಸ್ಥಳದಿಂದ ಸಾಗಣೆ ದೂರಕ್ಕೆ ಅನುಮೋದನೆ ಪಡೆಯುವುದು.
4) ಮೇಲಿನ ಕೆಲಸದ ವೆಚ್ಚವನ್ನು ಉಪ ಅನುದಾನದಡಿಯಲ್ಲಿ ಭರಿಸುವುದು.
5) ವಿನ್ಯಾಸಗಳನ್ನು ಸಂಬಂಧಪಟ್ಟ ಮೇಲಾಧಿಕಾರಿಗಳಿಂದ ಅನುಮೋದಿಸಿಕೊಂಡು ಕಾರ್ಯಗತಗೊಳಿಸುವುದು.

ಕಾರ್ಯಪಾಲಕ ಅಭಿಯಂತರರು(ವಿದ್ಯುತ್)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ರಾಜರಾಜೇಶ್ವರಿ ನಗರ ವಲಯ.

ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ.

1) ಅಧೀಕ್ಷಕ ಅಭಿಯಂತರರು (ವಿದ್ಯುತ್), ಬೃ.ಬೆಂ.ಮ.ಪಾ, ರವರ ಮಾಹಿತಿಗಾಗಿ,
2) ಕಛೇರಿ ಪ್ರತಿ.

Scanned by CamScanner